ಚಿಂತಾಮಣಿ ತಾಲ್ಲೂಕು ಅಡ್ಡಗೆಲ್ ನೆಲವಂಕಿ ಜಂಗಲ್.

ಅಂದಾಜು ಸ್ಕ್ವೇಯರ್ ಮೈಲ್ 53¾.

ಪೂರ್ವ—ಬೂರಗಮಾಕಲ್‌ಪಲ್ಲಿ ಸರ್ವೆ ನಂಬರ್ 44ನೇದರಲ್ಲಿ ಡಿವಾರ್ಕೇಷನ್ ಲೈನು, ಪ್ರಾರಂಭವಾಗಿ ತುಪ್ಪಲ್ಲಿ ಸರ್ವೆ ನಂಬರ್ 32ನೇ ಮಧ್ಯದಲ್ಲಿ ಲೈನು ಹೋಗುತ್ತದೆ.

ದಕ್ಷಿಣ—ಸದರಿ ಲೈನು ಮುಂಚ್ಚಿನೇಳ್ಳುಕೋಟೆ ಸರ್ವೆ ನಂಬರ್ 188 ಗೊಲ್ಲಪಲ್ಲಿ ಸರ್ವೆ ನಂಬರ್ 16 ಪಾತನೆಲವಂಕಿ ಸರ್ವೆ ನಂಬರ್ 18 ಸೊಣಪಲ್ಲಿ ಸರ್ವೆ ನಂಬರ್ 14—30 ಕುರಪಲ್ಲಿ ಸರ್ವೆ ನಂಬರ್ 69 ಯಿವುಗಳ ಮಧ್ಯೆ ಮತ್ತು ತಿಮ್ಮನಪಲ್ಲಿ ಖರಾಬ್ ಜಮೀನ್ ಮಧ್ಯದಲ್ಲಿ ಹೋಗಿ ಕೋಡಿಪಲ್ಲಿ ಸರ್ವೆ ನಂಬರ್ 17ನೇ ಮಧ್ಯೆ ಹೋಗುತ್ತದೆ.

ಪಶ್ಚಿಮ—ಮೇಲಿನ ಹದ್ದಿನಿಂದ ಲೈನ್, ದಿಗವಮಾರಂಪಲ್ಲಿ ಸರ್ವೆ 61—67—64 ತಿಮ್ಮನಪಲ್ಲಿ ಸರ್ವೆ ನಂಬರ್ 26—40—66—72—52 ಕಂಭಾಲಪಲ್ಲಿ ಸರ್ವೆ ನಂಬರ್ 27 ಯಿವುಗಳ ಮಧ್ಯೆ ಲೈನು, ಹೋಗುತ್ತದೆ.

ಉತ್ತರ—ಸದರೀ ಹದ್ದಿನಿಂದ ಲೈನು ತುಮ್ಮಲವಾಕಪಲ್ಲಿ ಸರ್ವೆ ನಂಬರ್ 39—28—112 ಅಡ್ಡಗಲ್ ಸರ್ವೆ ನಂಬರಿ 87—79—189—156 ಯಿವುಗಳ ಮಧ್ಯೆ ಹಾದು ಪ್ರಾರಂಭ ಸ್ಥಳಕ್ಕೆ ಲೈನು ಕಲಿಯುತ್ತೆ.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ನಂಡೀದುರ್ಗ ಡಿವಿಜ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ॥ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 327.

ಮುಳಬಾಗಲಲ್ಲಿ ಮೃತಪಟ್ಟ ಅಕಾರಪಾಕಂ ನಾರಣಯ್ಯನ ಆಸ್ತೀ ವಿಷಯದಲ್ಲಿ—

ಅರ್ಜಿದಾರು ಕೋಲಾರದಲ್ಲಿರುವ ರಂಗಪ್ಪ ವುರಫ್ ರಂಗಯ್ಯಂಗಾರು, ಮೃತಪಟ್ಟ ಸದರೀ ನಾರಣಯ್ಯನಿಗೆ, ತಮ್ಮನು ಆಗಬೇಕೆಂಬ ಹಕ್ಕುದಾರಿ ಮೇಲೆ ಮುಳಬಾಗಲ್ ಸ್ಥಳದ ಅಕಾರಪಾಕಂ ರಂಗಪ್ಪ ವುರಫ್ ರಂಗಯ್ಯಂಗಾರು, ಮುಳಬಾಗಲ್ ವಾಸಸ್ಥರಾಗಿ ಮೃತಪಟ್ಟ ನಾರಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ॥ 1860ನೇ ಇಸವಿ 27ನೇ ಆಕ್ಟ್ಯು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಸ್ ನೂಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗಪ್ಪ ವುರಫ್ ರಂಗಯ್ಯಂಗಾರು ಅರ್ಜಿಯನ್ನು ಸ॥ 1895ನೇ ಇಸವಿ ಜನ್ವರಿ ತಿಂಗಳ ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ॥ 1895ನೇ ಇಸವಿ ಮಾರ್ಚಿ ತಿಂಗಳ 11ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್
ಡಿಸ್ಟ್ರಿಕ್ಟು ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1 ಕೆರೆ ಕಂಟ್ರಿಬ್ಯೂರ್ಷನ್ ಕಂದಾಯದ ಬಾಕೀದಾರರಾದ ಈ ಕೆಳಗೆ ನಮೂದಿಸುವ ಜೋಡೀದಾರರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ತಾಲ್ಲೂಕು ಈಚೇರಿಯಲ್ಲಿ ಈ ಕೆಳಗೆ ನಮೂದಾಗುವ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇಧೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2 ಸದರೀ ಸ್ವತ್ತಿಗಾಗಿ ಹರಾಜುದಾರನು 1894—95ನೇ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ ರೂಪಾಯಿ ಆಗಿರುತ್ತೆ.

3 ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಕೇಕಡಾ 25ನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4 ಅಂತಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ

5. ಹರಾಜಿನಲ್ಲಿ ಸವಾಲ್‌ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ, ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಕವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ, ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಅತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಖರ್ಚಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಖಾವತಿ ಮಾಡಿದಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸೈ೯ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೂಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಕವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬ್ಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕನ್ನಡ ತಂ.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ ತರೀ ಅಥವಾ ಬಾಗಾಯತು ಯಿತು.	ವಿಸ್ತೀರ್ಣ.	ಅಕಾರ.	ಸರ್ಕಾರಕ್ಕೆ ಬರಬೇಕಾದ ಜೋಪೈಸೆ ಭೀನಗ್ಗೆರ ಸಹಿತವಾದ ಬಾಬ್ತೇ ಮೊಲಗು.	ಹರಾಜ್ ತಾರೀಖು.	1894—95ನೇ ಸಾಲಿಗೆ ಹರಾಜಿನಲ್ಲಿ ಪಡದವನು ಈ ಸ್ವತ್ತಿಗಾಗಿ ಕೊಡಬೇಕಾದ ಮೊಲಗು.
1	2	3	4	5	6	7	8	9	10	11	12	13
								ಎಕರೆ. ಗು.	ರೂ. ಆ. ಪೈ.	ರೂ. ಆ. ಪೈ.		
ಬೆಂಗಳೂರು	ಕೃಷ್ಣರಾಜಪುರ ಹೋಬಳಿ	ಜೋಡೀ ಕಲ್ಲುಕೆರೆ	ಗಂಗಾಧರಪಟ್ಟು ಮೈನೇರು 41 ಜನಗಳು	:	ರೂ. ಆ. ಪೈ.	ಪೂರಾ ಗ್ರಾನು.	ಖುಷ್ಕೀ	827 5	837 7 5	1177 0 0	29ನೇ ಮಾರ್ಚಿ 1895ನೇ ಇಸವಿ.	ಸಾಲ್ ಮಜಕೂರಿಗೆ ಸಲ್ಲತಕ್ಕ ಜೋಡಿ
							ತರೀ	189 20	759 14 3	ಕೆರೆ ಕಂಟ್ರಿ ಬ್ಯಾಷ್ಟ್		
							ಬಾಗಾಯತು.	31 20	113 14 9			
							ಪರಂಪೋಕು.	201 23	38 0 0			
								1249 28	1749 4 5			
							ಸಾಲಿಯಾನಾ ಸಲ್ಲತಕ್ಕ ಜೋಡಿ	.. .	766 6 9			766—6—9

ಎಮ್ಂ. ಅಣ್ಣಾಜಿರಾವ್,
ಫಾರ್ ಡೆಪ್ಯೂಟಿ ಕಮ್ಮಿಷನರ್.